**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**(ಕುಂದಾಪುರದಲ್ಲಿ ಕಾರ್ಯನಿರ್ವಹಣೆ) ಕುಂದಾಪುರ**

**ಸೆಶನ್ ಕೇಸ್ ನಂಬ್ರಃ 2/2013**

ಪಿರ್ಯಾದುದಾರರು : ಸರ್ಕಾರದ ಪರವಾಗಿ ಅಮಾಸೆಬೈಲು ಪೋಲೀಸರು

ವಿರುದ್ಧ

ಆರೋಪಿ : ಉಮ್ಮರ್ ಫಾರೂಕ್
ಪ್ರಾಯ 43 ವರ್ಷ
ಬಿನ್ಃ ಮುಹಮ್ಮದ್
ವಾಸಃ ಬಳ್ಪೂರು ಹೌಸ್
ಮೊಗ್ರಲ್‌ಪುತ್ತೂರು ಅಂಚೆ ಕೂಡ್ಲು
ಕಾಸರಗೋಡು, ಕೇರಳ.

********

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರಡಿಯಲ್ಲಿ ಆರೋಪಿ ಹೇಳಿಕೆ

**ಪ್ರ.ನಂ.1ಃ** ನೀನು ಅಭಿಯೋಜನೆಯ ಪರ ನುಡಿದ ಸಾಕ್ಷಿಗಳ ಹೇಳಿಕೆಯನ್ನು ಆಲಿಸಿದ್ದೀರಾ?

**ಉತ್ತರಃ** ಹೌದು

**ಪ್ರ.ನಂ.2ಃ ಬಾಲಕೃಷ್ಣ ಶೆಟ್ಟಿ (ಪಿಡಬ್ಲ್ಯೂ-1)** ರವರು ತಮ್ಮ ಸಾಕ್ಷ್ಯದಲ್ಲಿ ತಾನು ಕುಂದಾಪುರದ ಚಿನ್ಮಯಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾಗ ದಿನಾಂಕಃ26-12-2004 ರಂದು ಮಧ್ಯಾಹ್ನ 3 ಗಂಟೆಗೆ ಮಾರುತಿ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಪ್ರಯಾಣಿಕರೇ ಭದ್ರಾವತಿಯ ಅಬ್ದುಲ್ ಕಾಯೂಮ್ ಸಾಹೇಬರ ಮಗನಾದ ಶೌಕತ್ ಆಲಿ ಕುತ್ತಿಗೆಗೆ ಹಗ್ಗದಿಂದ ಬಿಗಿದು ತಲೆಗೆ ಗುದ್ದಿದ್ದರಿಂದ ಗಾಯಾಳು ಸಿದ್ದಾಪುರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಚಿಕಿತ್ಸೆಗಾಗಿ ಹೋಗಿದ್ದು ಅಲ್ಲಿನ ವೈದ್ಯರ ಸಲಹೆಯ ಮೇರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಬಂದಿದ್ದವನನ್ನು ತಾನು ಪರೀಕ್ಷಿಸಿ ಆತನಿಗೆ ಸಾದಾ ಹಾಗೂ ತಾಜಾ ಸ್ವರೂಪದ ಗಾಯಗಳಾದ ಬಗ್ಗೆ ಗಾಯದ ಪ್ರಮಾಣ ಪತ್ರ (ನಿಪಿ-1) ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

ಪ್ರ.ನಂ.3ಃ ಇದೇ ಸಾಕ್ಷಿ ಮುಂದುವರಿದು ಸದ್ರಿ ಗಾಯಾಳು ತಮ್ಮ ಆಸ್ಪತ್ರೆಯಲ್ಲಿ 4 ದಿನಗಳ ಕಾಲ ಒಳರೋಗಿಯಾಗಿದ್ದು, ಗಾಯದ ಪ್ರಮಾಣ ಪತ್ರ (ನಿಪಿ-1)ದಲ್ಲಿ ನಮೂದಿಸಿರುವ 1 ಮತ್ತು 2 ನೇ ಗಾಯಗಳು ಟೆಲಿಫೋನ್ ವಯರ್ (ಮೂ.ಮಾ.1) ನಿಂದ ಹಾಗೂ 3 ನೇ ಗಾಯವು ಕಬ್ಬಿಣದ ರಾಡ್ (ಮು.ಮಾ.2) ನಿಂದ ಹಲ್ಲೆ ಮಾಡಿದಾಗ ಆಗುವ ಸಾಧ್ಯತೆ ಇರುತ್ತದೆಂದೂ ಹಾಗೂ ಈ ಬಗ್ಗೆ ತಾನು ಕುಂದಾಪುರದ ವೃತ್ತ ನಿರೀಕ್ಷಕರಿಗೆ ದೃಢೀಕರಣ ಪತ್ರ (ನಿಪಿ-2) ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

ಪ್ರ.ನಂ.4ಃ **ಶೌಖತ್ ಆಲಿ (ಪಿಡಬ್ಲ್ಯೂ-2)** ರವರು ತಮ್ಮ ಸಾಕ್ಷ್ಯದಲ್ಲಿ ತಾನು 2004 ನೇ ಸಾಲಿನ ಡಿಸೆಂಬರ್ ತಿಂಗಳಿನಲ್ಲಿ ಭದ್ರಾವತಿಯ ಅಜ್ಜರ್ ಎಂಬುವವರ ಮಾರುತಿ ಓಮಿನಿ ಕಾರಿನಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದು, ಸದ್ರಿ ಕಾರಿನ ನಂಬ್ರ ಕೆಎ-05-ಝಡ್-2476 ಆಗಿದ್ದು ಸದ್ರಿ ಕಾರನ್ನು ಸಾಮಾನ್ಯವಾಗಿ ತಾನು ಭದ್ರಾವತಿಯ ಬಸ್ ನಿಲ್ದಾಣದ ಬಳಿ ಇರುವ ಕಾರ್ ಸ್ಟ್ಯಾಂಡ್‌ನಲ್ಲಿ ನಿಲ್ಲಿಸುತ್ತಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂ.5ಃ ಇದೇ ಸಾಕ್ಷಿ ಮುಂದುವರಿದು ದಿನಾಂಕಃ25-12-2004 ರಂದು ಸಾಯಂಕಾಲ 7.00 ಗಂಟೆ ಸಮಯಕ್ಕೆ ತಾನು ಭದ್ರಾವತಿ ಕಾರ್ ಸ್ಟ್ಯಾಂಡಿನಲ್ಲಿರುವಾಗ ನೀನು ಹಾಗೂ ನಿನ್ನೊಂದಿಗಿದ್ದ ಇತರೇ 4 ಜನ ಆರೋಪಿತರು ಸೇರಿ ತನ್ನ ಬಳಿ ಬಂದಿದ್ದು, ನೀವೆಲ್ಲರೂ (ಆರೋಪಿತರು) ನಿಮಗೆ ಬ್ರಹ್ಮಾವರಕ್ಕೆ ಹೋಗಲು ಬಾಡಿಗೆಗೆ ಕಾರು ಬೇಕು ಅದಕ್ಕೆ ಎಷ್ಟು

ಹಣ ಆಗುತ್ತದೆ ಎಂದು ಕೇಳಿದ್ದು ಅದಕ್ಕೆ ತಾನು ಸಾವಿರದ ಎಂಟು ನೂರು ಆಗುತ್ತದೆಂದು ಹೇಳಿದ್ದು ನಂತರ ನೀವೆಲ್ಲರೂ (ಆರೋಪಿಗಳು) ರೂ:1,600-00 ಕ್ಕೆ ಬರುತ್ತಿಯಾ ಎಂದು ಕೇಳದ್ದಕ್ಕೆ ತಾನು ಒಪ್ಪಿಕೊಂಡಿದ್ದಕ್ಕೆ ನೀವೆಲ್ಲರೂ (ಆರೋಪಿಗಳು) ತಕ್ಷಣವೇ ಮುಂಗಡವಾಗಿ ರೂ:350-00 ನೀಡಿ ಬೆಳಿಗ್ಗೆ 9.30 ಗಂಟೆಗೆ ಬಾಡಿಗೆಗೆ ಕಾರು ಬೇಕು ಎಂದು ಹೇಳಿ ಹೋಗಿದ್ದು ನಂತರ ತಾನು ಮಾರನೇ ದಿನ ಅಂದರೆ ದಿ:26-12-2004 ರಂದು ಬೆಳಿಗ್ಗೆ 9.30 ಗಂಟೆಗೆ ಕಾರ್ ಸ್ಟ್ಯಾಂಡ್ ಬಳಿ ಇದ್ದಾಗ ನೀನು (ಆರೋಪಿ) ಹಾಗೂ ನಿನ್ನೊಂದಿಗಿದ್ದ ಇತರೇ ಆರೋಪಿತರು ತನ್ನ ಕಾರಿನ ಬಳಿ ಬಂದಿದ್ದ, ನಂತರ ನೀವೆಲ್ಲಾ (ಆರೋಪಿಗಳು) ಭದ್ರಾವತಿಯಿಂದ ಹೊರಟಾಗ ನೀವು (ಆರೋಪಿಗಳು) ತೀರ್ಥಹಳ್ಳಿಯಲ್ಲಿ ನಿಮ್ಮ ಬಳಗದವರು ಇದ್ದಿದ್ದು ಅಲ್ಲಿಗೆ ಹೋಗಿ ಹೋಗೋಣ ಎಂದು ಹೇಳಿದ ಕಾರಣ ಅಲ್ಲಿಗೆ ಹೋದಾಗ ತೀರ್ಥಹಳ್ಳಿಯಲ್ಲಿ ನಿಮ್ಮಲ್ಲಿ ಒಬ್ಬ ಆರೋಪಿ ಕಾರಿನಲ್ಲಿಯೇ ಉಳಿದುಕೊಂಡು ಉಳಿದ ನೀವೆಲ್ಲರೂ (ಆರೋಪಿಗಳು) ಕಾರಿನಿಂದ ಇಳಿದು ಹೋಗಿ ಸ್ವಲ್ಪ ಹೊತ್ತಿನಲ್ಲಿ ಅಂದರೆ 12.30 ಗಂಟೆಗೆ ಹಿಂದಿರುಗಿ ಬಂದು ಅವರ ಸಂಬಂಧಿಕರು ಆಗಲೇ ಬ್ರಹ್ಮಾವರಕ್ಕೆ ಹೊರಟು ಹೋಗಿರುವುದಾಗಿ ತಿಳಿಸಿ ಮತ್ತೆ 5 ಜನರೂ ಕಾರಿನಲ್ಲಿ ಕುಳಿತು ಬ್ರಹ್ಮಾವರಕ್ಕೆ ಹೋಗಲು ಬಾಳೆಬರೆ ಘಾಟ್ ಕಡೆಗೆ ಹೊರಟೆವೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರ: ಸುಳ್ಳು

ಪ್ರ.ನಂ.6: ಇದೇ ಸಾಕ್ಷಿ ಮುಂದುವರಿದು ಮಧ್ಯಾಹ್ನ ಸುಮಾರು 2.00 ಗಂಟೆ ಸಮಯಕ್ಕೆ ಬಾಳೆಬರೆ ಘಾಟ್‌ನ 2 ನೇ ತಿರುವಿನಲ್ಲಿ ನೀವುಗಳು (ಆರೋಪಿಗಳು) ಹೇಳಿದಂತೆ ತಾನು ಕಾರನ್ನು ನಿಲ್ಲಿಸಿದಾಗ ನೀವೆಲ್ಲಾ ಕಾರಿನಿಂದ ಇಳಿದು ನಿಮ್ಮಲ್ಲಿ ಒಬ್ಬ ಘಾಟಿನಲ್ಲಿ ಸ್ವಲ್ಪ ದೂರ ಇಳಿದು ಹೋಗಿದ್ದು, ಉಳಿದ ನಿಮ್ಮಲ್ಲಿ ಒಬ್ಬ ವ್ಯಕ್ತಿ ಕಬ್ಬಿಣದ ರಾಡ್‌ನಿಂದ ತನ್ನ ತಲೆಯ ಹಿಂಭಾಗಕ್ಕೆ ಕುತ್ತಿಗೆಗೆ ಹೊಡೆದು ಟೆಲಿಫೋನ್ ವಯರ್ ನಿಂದ ಕುತ್ತಿಗೆಗೆ ಹಾಕಿ ಬಿಗಿದಾಗ ತನಗೆ ಜ್ಞಾನ ತಪ್ಪಿದಂತೆ ಆಗಿದ್ದು ನಂತರ ನೀವೆಲ್ಲರೂ (ಆರೋಪಿತರು) ತನಗೆ ಕಾಲುಗಳಿಂದ ಒದ್ದು ಕಾರನ್ನು ತೆಗೆದುಕೊಂಡು ಹೊರಟು ಹೋಗಿದ್ದೀರೆಂದು

ನಂತರ ತನಗೆ ಸಂಜೆ 5.00 ಗಂಟೆಗೆ ಸಿದ್ದಾಪುರದ ಆಸ್ಪತ್ರೆಯಲ್ಲಿ ಪ್ರಜ್ಞೆ ಬಂತೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

ಪ್ರ.ನಂ.7ಃ ಇದೇ ಸಾಕ್ಷಿ ಮುಂದುವರಿದು ನೀವುಗಳು (ಆರೋಪಿಗಳು) ತಲೆಗೆ ಹೊಡೆದ ಕಾರಣ ತನ್ನ ತಲೆಗೆ ಗಾಯವಾಗಿದ್ದು ಕುತ್ತಿಗೆಗೆ ನೋವಾಗಿ ಊತ ಬಂದಿದ್ದು, ಮೂಗು ಮತ್ತು ಬಾಯಲ್ಲಿ ರಕ್ತ ಬಂದಿದ್ದು ತಾನು ಆಸ್ಪತ್ರೆಯಲ್ಲಿ ಇದ್ದಾಗ ಪೋಲೀಸರು ಬಂದಾಗ ತಾನು ನಡೆದ ಘಟನೆಯನ್ನು ಪೋಲೀಸರಿಗೆ ವಿವರಿಸಿದಾಗ ಅವರು ತನ್ನ ಹೇಳಿಕೆಯನ್ನು (ನಿಪಿ-3) ಸಂಜೆ ಸುಮಾರು 5 ಗಂಟೆಗೆ ಬರೆದುಕೊಂಡು ಓದಿ ಹೇಳಿದ ನಂತರ ತಾನು ತನ್ನ ಹೇಳಿಕೆಗೆ ಸಹಿ ಮಾಡಿದ್ದು ನಂತರ ತನ್ನನ್ನು ಸಿದ್ದಾಪುರ ಆಸ್ಪತ್ರೆಯಿಂದ ಕುಂದಾಪುರದ ಚಿನ್ಮಯಿ ಆಸ್ಪತ್ರೆಗೆ ಕಾರಿನಲ್ಲಿ ಕರೆದುಕೊಂಡು ಬಂದಿದ್ದು, ತಾನು ಅಲ್ಲಿ 4 ದಿನಗಳ ಕಾಲ ಇದ್ದು ಬಿಡುಗಡೆಯಾಗಿದ್ದೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

ಪ್ರ.ನಂ.8ಃ ಇದೇ ಸಾಕ್ಷಿ ಮುಂದುವರಿದು ತಾನು ಘಟನೆ ಕಾಲಕ್ಕೆ ಒಂದು ಹಸಿರು ಬಣ್ಣದ ಟೀ ಶರ್ಟು ಮತ್ತು ಪ್ಯಾಂಟ್ ಧರಿಸಿದ್ದು, ಟೀ ಶರ್ಟಿಗೆ (ಮು.ಮಾ.3) ರಕ್ತವಾಗಿದ್ದು ಅದನ್ನು ಪೋಲೀಸರು ತನ್ನಿಂದ ಅಮಾನತುಪಡಿಸಿಕೊಂಡು ಪಂಚನಾಮೆ (ನಿಪಿ-4) ಮಾಡಿದ್ದು, ಅದೇ ದಿನ ಪೋಲೀಸರನ್ನು ಪಂಚರೊಂದಿಗೆ ಘಟನಾ ಸ್ತಳಕ್ಕೆ ಕರೆದುಕೊಂಡು ಹೋಗಿ ಘಟನಾ ಸ್ಥಳವನ್ನು ತೋರಿಸಿದ್ದು ಸದ್ರಿ ಸ್ತಳ ಕುಂದಾಪುರ ತಾಲೂಕು, ಹೊಸಂಗಡಿ ಗ್ರಾಮದ ಬಾಳೆಬರೆ ಘಾಟ್‌ನಲ್ಲಿ ಹೊಸಂಗಡಿಯಿಂದ ಮಾಸ್ತಿಕಟ್ಟೆಗೆ ಹೋಗುವ ಥಾರು ರಸ್ತೆಯಾಗಿದ್ದು ಆ ಜಾಗವನ್ನು ಪೋಲೀಸರು ಪರಿಶೀಲನೆ ಮಾಡಿ ಪಂಚನಾಮೆ (ನಿಪಿ-5) ರಚಿಸಿದ್ದು ಘಟನಾ ಸ್ಥಳ ಸುತ್ತ ಮುತ್ತ ಯಾವುದೇ ಮನೆ ವಗೈರೆ ಇಲ್ಲದೇ ಅದು ಘಾಟ್ ಪ್ರದೇಶವಾಗಿದ್ದು ನಿರ್ಜನವಾಗಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

ಪ್ರ.ನಂ.9ಃ ಇದೇ ಸಾಕ್ಷಿ ಮುಂದುವರಿದು ದಿನಾಂಕಃ11-01-2025 ರಂದು ಮತ್ತೆ ತನ್ನನ್ನು ಉಡುಪಿ ಕಾರಾಗೃಹಕ್ಕೆ ಕರೆ ತಂದಿದ್ದು, ನಿಮ್ಮಗಳ (ಆರೋಪಿಗಳು) ಜೊತೆಯಲ್ಲಿ ಬೇರೆ ಬೇರೆಯಾಗಿ 10 ಜನರನ್ನು ನಿಲ್ಲಿಸಿದಾಗ ಅವರಲ್ಲಿ 5 ಜನ ಆರೋಪಿಗಳಾದ ನಿಮ್ಮನ್ನು ಗುರುತಿಸಿದ್ದು ಈ ಬಗ್ಗೆ ಪೋಲೀಸರು ತನ್ನ ಹೇಳಿಕೆ ಮಾಡಿಕೊಂಡಿದ್ದು, ನೀವುಗಳು (ಆರೋಪಿಗಳು) ತನಗೆ ಹೊಡೆಯಲು ಉಪಯೋಗಿಸಿದ ಕಬ್ಬಿಣದ ರಾಡ್ (ಮು.ಮಾ.2) ಮತ್ತು ತನಗೆ ಕುತ್ತಿಗೆಗೆ ಹಾಕಿ ಗೀರಿದ್ದ ಟೆಲಿಫೋನ್ ವಯರ್ (ಮು.ಮಾ.1)ಗಳನ್ನು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

**ಪ್ರ.ನಂ.10ಃ ಸೂರ್ಯ (ಪಿಡಬ್ಲ್ಯೂ-3)** ರವರು ತಮ್ಮ ಸಾಕ್ಷ್ಯದಲ್ಲಿ ತಾನು ಶಿವಮೊಗ್ಗ ಜಿಲ್ಲೆ ಸಾಗರದಲ್ಲಿ ಒಂದು ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದು ತನ್ನ ತಾಯಿ ಮತ್ತು ಕುಟುಂಬದ ಸದಸ್ಯರು ಆಜ್ರಿ ಗ್ರಾಮದಲ್ಲಿ ವಾಸ ಮಾಡಿಕೊಂಡಿದ್ದು, ತಾನು ಚಾಸಾ.1 ಶೌಕತ್ ಆಲಿ ರವರನ್ನು ಒಮ್ಮೆ ನೋಡಿದ್ದು ದಿಃ26-12-2004 ರಂದು ತಾನು ಆಜ್ರಿ ಗ್ರಾಮಕ್ಕೆ ಹೋಗಲು ಸಾಗರದಿಂದ ಹನುಮಾನ್ ಎಂಬ ಬಸ್ಸಿನಲ್ಲಿ ಬರುತ್ತಿದ್ದಾಗ ಮಧ್ಯಾಹ್ನ 2.40 ಗಂಟೆ ಸಮಯಕ್ಕೆ ಬಸ್ಸು ಬಾಳೆ ಬರೆ ಘಾಟ್ ನಲ್ಲಿ ಬರುತ್ತಿರುವಾಗ ಚಾಸಾ.1 ಶೌಕತ್ ಆಲಿ ರಸ್ತೆಯ ಬದಿಯಿಂದ ರಸ್ತೆಯ ಕಡೆಗೆ ಬಂದು ಬಸ್ಸಿಗೆ ಕೈ ಅಡ್ಡ ನಿಲ್ಲಿಸಿ ಬಸ್ ನಿಲ್ಲಿಸಿದ್ದು ಬಸ್ಸಿನಿಂದ ತಾನು, ಚಾಲಕ ಮತ್ತು ಕಂಡೆಕ್ಟರ್ ಮತ್ತು ಇತರೇ ಪ್ರಯಾಣಿಕರು ಕೆಳಗೆ ಇಳಿದು ಚಾಸಾ.1 ರನ್ನು ನೋಡಿದಾಗ ಆತನ ತಲೆಗೆ ಹೊಡೆತ ಬಿದ್ದು ಗಾಯವಾಗಿದ್ದು ಆತನು ತೊಟ್ಟಿದ್ದ ಟೀ ಶರ್ಟು ರಕ್ತವಾಗಿದ್ದು, ಕುತ್ತಿಗೆ ಸಹ ಉಬ್ಬಿದ್ದು ನಂತರ ಆತನನ್ನು ಬಸ್ಸಿಗೆ ಹಾಕಿಕೊಂಡು ಬಂದು ಸಿದ್ದಾಪುರ ಸರ್ಕಾರಿ ಆಸ್ಪತ್ರೆಗೆ ತಂದು ದಾಖಲಿಸಿದ್ದು, ನಂತರ ತಾನು ಸಂಜೆ ಸುಮಾರು 6.00 ಗಂಟೆ ಸಮಯಕ್ಕೆ ಆಸ್ಪತ್ರೆ ಬಳಿಗೆ ಹೋದಾಗ ಚಾಸಾ.1 ಶೌಕತ್ ಆಲಿ ರವರು ಘಟನೆಯ ಬಗ್ಗೆ ಎಲ್ಲಾ ವಿವರ ಹೇಳಿದ್ದು ಅಂದರೆ 5 ಜನರು ಆತನನ್ನು ಭದ್ರಾವತಿಯಿಂದ ಬಾಡಿಗೆಗೆ ಮಾತನಾಡಿ ಕಾರಿನಲ್ಲಿ ಕರೆತಂದು ಅವನಿಗೆ ಕಬ್ಬಿಣದ

ರಾಡ್ ನಿಂದ ಹಲ್ಲೆ ಮಾಡಿ ವಯರ್ ನಿಂದ ಕುತ್ತಿಗೆಗೆ ಬಿಗಿದು ಕಾರನ್ನು ದರೋಡೆ ಮಾಡಿಕೊಂಡು ಹೋಗಿದ್ದಾಗಿ ಹೇಳಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

**ಪ್ರ.ನಂ.11ಃ ದೇವರಾಜ್ (ಪಿಡಬ್ಲ್ಯೂ-4)** ರವರು ತಮ್ಮ ಸಾಕ್ಷ್ಯದಲ್ಲಿ ತಾನು ಈ ಪ್ರಕರಣದ ಗಾಯಾಳು ಪ್ರಾಸಾ.1 ಶೌಕತ್ ಆಲಿಯನ್ನು ಒಮ್ಮೆ ನೋಡಿದ್ದು, ದಿನಾಂಕಃ26-12-2004 ರಂದು ಹೊಸಂಗಡಿಯಲ್ಲಿ ಕ್ರಿಕೆಟ್ ಮ್ಯಾಚ್ ನೋಡಲು ಮಾಸ್ತಿಕಟ್ಟೆಯಿಂದ ಹನುಮಾನ್ ಬಸ್ಸಿನಲ್ಲಿ ಬರುತ್ತಿದ್ದಾಗ ಮಧ್ಯಾಹ್ನ ಸುಮಾರು 2.40 ಗಂಟೆ ಸಮಯದಲ್ಲಿ ತಮ್ಮ ಬಸ್ಸು ಬಾಳೆಬರೆ ಘಾಟ್‌ನಲ್ಲಿ ಬರುತ್ತಿರುವಾಗ ರಸ್ತೆಯ ಪಕ್ಕದಲ್ಲಿ ಒಬ್ಬ ವ್ಯಕ್ತಿ ಬಿದ್ದಿದ್ದು ಆತ ಬಿದ್ದಲ್ಲಿಂದಲೇ ಕೈ ಆಡಿಸಿ ಬಸ್ ನಿಲ್ಲಿಸಲು ಸನ್ನೆ ಮಾಡುತ್ತಿದ್ದು, ತಕ್ಷಣ ಬಸ್ಸನ್ನು ನಿಲ್ಲಿಸಿದಾಗ ಬಸ್ಸಿನಿಂದ ತಾನು, ಡ್ರೈವರ್, ಕಂಡೆಕ್ಟರ್ ಮತ್ತು ಇತರ ಪ್ರಯಾಣಿಕರು ಪ್ರಾಸಾ.3 ಸೂರ್ಯ ರವರು ಕೆಳಗಿಳಿದು ಆ ವ್ಯಕ್ತಿಯನ್ನು ನೋಡಿದಾಗ ಆ ವ್ಯಕ್ತಿಯೇ ಪ್ರಾಸಾ.2 ಶೌಕತ್ ಆಲಿ ಆಗಿದ್ದು ಆತನ ತಲೆಗೆ ಹೊಡೆತ ಬಿದ್ದಿದ್ದು, ಕುತ್ತಿಗೆಗೆ ಸ್ವಲ್ಪ ಊತ ಬಂದಿದ್ದು ಹಾಕಿದ್ದ ಟೀ ಶರ್ಟಿಗೆ ರಕ್ತ ತಾಗಿದ್ದು ಆತನನ್ನು ತಾವು ಬಸ್ಸಿನಲ್ಲಿ ಕರೆದುಕೊಂಡು ಬಂದು ಸಿದ್ದಾಪುರ ಆಸ್ಪತ್ರೆಗೆ ದಾಖಲಿಸುವಾಗ ಆತ ಮಾತನಾಡುವ ಸ್ಥಿತಿಯಲ್ಲಿರದೇ ಚಿಕಿತ್ಸೆ ನೀಡಿದ ನಂತರ ಆತ ಮಾತನಾಡುತ್ತಿದ್ದು ಆತನು ತಮ್ಮಲ್ಲಿ ಭದ್ರಾವತಿಯಿಂದ ಯಾರೋ 5 ಜನ ಆತನ ಕಾರನ್ನು ಬಾಡಿಗೆಗೆ ಮಾತನಾಡಿಕೊಂಡು ದಾರಿಯಲ್ಲಿ ಬರುವಾಗ ಆತನಿಗೆ ಹೊಡೆದು ಕುತ್ತಿಗೆಯನ್ನು ವಯರ್ ನಿಂದ ಬಿಗಿದು ಆತನನ್ನು ಘಾಟ್ ಬಳಿಯಲ್ಲಿಯೇ ಬಿಟ್ಟು ಕಾರನ್ನು ದರೋಡೆ ಮಾಡಿಕೊಂಡು ಹೋಗಿದ್ದಾಗಿ ಹೇಳಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂ.12ಃ **ಕೆ ಎನ್ ಸುಬ್ಬಣ್ಣ (ಪಿಡಬ್ಲ್ಯೂ-5)** ರವರು ತಮ್ಮ ಸಾಕ್ಷ್ಯದಲ್ಲಿ ತಾನು 2005 ನೇ ಸಾಲಿನಲ್ಲಿ ಕುಂದಾಪುರ ತಾಲೂಕು ತಹಶೀಲ್ದಾರ್ ಆಗಿ ಸೇವೆಯಲ್ಲಿದ್ದಾಗ ಶಂಕರನಾರಾಯಣ ಪೋಲೀಸು ಠಾಣಾ ಅಪರಾಧ ಕ್ರಮ ಸಂಖ್ಯೆ 159/2004 ರಲ್ಲಿ ಕುಂದಾಪುರ ಆರಕ್ಷಕ ವೃತ್ತ ನಿರೀಕ್ಷಕರು ದಿನಾಂಕಃ07-01-2005 ರಂದು ಒಂದು ಮನವಿ ಪತ್ರ ನೀಡಿ ಈ ಪ್ರಕರಣದ ಆರೋಪಿಗಳಾದ ನಿಮ್ಮನ್ನು ಗುರುತು ಹಚ್ಚುವ ಕವಾಯತ್‌ನ್ನು ನಡೆಸಿಕೊಡಬೇಕೆಂದು ಕೋರಿಕೊಂಡಿದ್ದು, ಅವರ ಪತ್ರದ ಆಧಾರದ ಮೇಲೆ ದಿನಾಂಕಃ11-01-2005 ರಂದು ಬೆಳಿಗ್ಗೆ 11.00 ಗಂಟೆಗೆ ಉಡುಪಿ ಉಪ ಕಾರಾಗೃಹದ 1 ನೇ ಮಹಡಿಯಲ್ಲಿ ಗುರುತು ಹಚ್ಚುವ ಕವಾಯತ್‌ನ್ನು ನಡೆಸಲು ನಿರ್ಧರಿಸಿ ಪಿರ್ಯಾದಿದಾರರನ್ನು ಹಾಜರುಪಡಿಸಲು ಸಂಬಂಧಿಸಿದ ಪೋಲೀಸರಿಗೆ ನೋಟೀಸು ನೀಡಿ ಅದೇ ದಿನ 5 ಜನ ಆರೋಪಿಗಳಾದ ನಿಮ್ಮೊಂದಿಗೆ ಕಾರಾಗೃಹದಲ್ಲಿ ಬೇರೆ ಬೇರೆ ಕಡೆಗೆ ಇದ್ದ ಇತರ ಹತ್ತು ಜನ ಕೈದಿಗಳನ್ನು ಅಂದರೆ ಆರೋಪಿಗಳಾದ ನಿಮಗೆ ಸಮಾನಾಂತರವಾದ ವಯಸ್ಸಿನ ಬಣ್ಣ ಮತ್ತು ಎತ್ತರವುಳ್ಳ ವ್ಯಕ್ತಿಗಳನ್ನು ಆರಿಸಿಕೊಂಡು ಉಡುಪಿ ಉಪ ಕಾರಾಗೃಹದ 1 ನೇ ಮಾಡಿಗೆಯಲ್ಲಿ ಒಟ್ಟು 15 ಜನರನ್ನು ಬೇರೆ ಬೇರೆ ಕ್ರಮ ಸಂಖ್ಯೆಗಳಲ್ಲಿ ನಿಲ್ಲಿಸಲಾಯಿತೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

ಪ್ರ.ನಂ.13ಃ ಇದೇ ಸಾಕ್ಷಿ ಮುಂದುವರಿದು ಗುರುತು ಹಚ್ಚುವ ಕವಾಯತ್‌ಗೆ ಮೊದಲು ಫಿರ್ಯಾದಿದಾರರಾದ ಶೌಕತ್ ಆಲಿಗೂ ಆರೋಪಿತರಾದ ನಿಮಗೂ ಯಾವುದೇ ರೀತಿಯ ಸಂಪರ್ಕ ಏರ್ಪಡದಂತೆ ಮತ್ತು ಒಬ್ಬರಿಗೊಬ್ಬರಿಗೂ ಕಾಣಿಸದಂತೆ ಬೇರೆಯಾಗಿ ಇಟ್ಟಿದ್ದು ಯಾವುದೇ ಪೋಲೀಸು ಅಧಿಕಾರಿಗಳು ಸಹ ಗುರುತು ಹಚ್ಚುವ ಕವಾಯತ್‌ನ ಸಮಯದಲ್ಲಿ ಕಾರಾಗೃಹದ ಸರಹದ್ದಿನಲ್ಲಿ ಇರದಂತೆ ಜಾಗರೂಕತೆ ವಹಿಸಿದ್ದು, ನಂತರ ಫಿರ್ಯಾದಿದಾರರನ್ನು ಕರೆಸಿ ಗುರುತು ಹಚ್ಚುವ ಕವಾಯತ್‌ನ್ನು ನಡೆಸಿದಾಗ ಫಿರ್ಯಾದಿದಾರರು ಬಂದಿರುವ ಕಾರಣ, ಅವರು ಹಿಂದೆ ಎಂದಾದರೂ ನಿಮ್ಮನ್ನು (ಆರೋಪಿತರನ್ನು) ನೋಡಿದ್ದಾರೋ ಇಲ್ಲವೋ ಎಂದು ಖಚಿತಪಡಿಸಲು, ನಂತರ ವ್ಯಕ್ತಿಗಳನ್ನು ಗುರುತಿಸಲು ಹೇಳಿದಾಗ ಮೊದಲನೇಯ ಬಾರಿಗೆ ಶೌಕತ್ ಆಲಿ ಇವರು

ಸರತಿ ಸಾಲಿನಲ್ಲಿ ನಿಂತಿದ ಕ್ರಮ ಸಂಖ್ಯೆ 1 ರಲ್ಲಿದ್ದ ಫಾರುಕ್ , ಕ್ರಮಸಂಖ್ಯೆ 6 ರಲ್ಲಿದ್ದ ಮೊಹಮ್ಮದ್ ಯಾನೆ ಮುನ್ನ, ಕ್ರಮ ಸಂಖ್ಯೆ 10 ರಲ್ಲಿದ್ದ ಮೊಹಮ್ಮದ್ ಬಿಲಾಲ್ ಕ್ರಮ ಸಂಖ್ಯೆ 12 ರಲ್ಲಿ ಆಸಿಫ್ ಹಾಗೂ ಕ್ರಮ ಸಂಖ್ಯೆ 15 ರಲ್ಲಿ ಮೊಹಿದ್ ಉಲ್ಲಾ ಒಟ್ಟು 4 ಜನರನ್ನು ಗುರುತಿಸಿದ್ದು, ಸದ್ರಿ ಗುರುತು ಹಚ್ಚುವ ಕವಾಯತಿನ ನಡವಳಿಕೆಯ ವರದಿಯನ್ನು (ನಿಪಿ-7) ದಿನಾಂಕಃ13-01-2005 ರಂದು ಕುಂದಾಪುರದ ಜೆ ಎಂ ಎಫ್ ಸಿ ನ್ಯಾಯಾಧೀಶರಿಗೆ ಕಳುಹಿಸಿಕೊಟ್ಟಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

**ಪ್ರ.ನಂ.14ಃ ಲಕ್ಷ್ಮೀನಾರಾಯಣ (ಪಿಡಬ್ಲ್ಯೂ-6)** ರವರು ತಮ್ಮ ಸಾಕ್ಷ್ಯದಲ್ಲಿ ತಾನು 2004-2005 ನೇ ಸಾಲಿನಲ್ಲಿ ಬ್ರಹ್ಮಾವರ ಪೋಲೀಸು ಠಾಣೆಯಲ್ಲಿ ಮುಖ್ಯ ಆರಕ್ಷಕನಾಗಿ ಕರ್ತವ್ಯದಲ್ಲಿದ್ದಾಗ ದಿನಾಂಕಃ26-12-2004 ರಂದು ಬ್ರಹ್ಮಾವರ ಪೋಲೀಸು ವೃತ್ತ ನಿರೀಕ್ಷಕರಾದ ಶ್ರೀ ವಿದ್ಯಾಶಂಕರ ರವರು ಉಡುಪಿ ನಿಸ್ತಂತು ಮೂಲಕ ಶಂಕರನಾರಾಯಣ ಪೋಲೀಸು ಠಾಣಾ ವ್ಯಾಪ್ತಿಯಲ್ಲಿ ಒಂದು ಮಾರುತಿ ಓಮಿನಿ ಚಾಲಕನಿಗೆ ಹಲ್ಲೆ ಮಾಡಿ ಚಾಲಕನನ್ನು ದೂಡಿ ವಾಹನವನ್ನು ಚಲಾಯಿಕೊಂಡು ಹೋಗಿದ್ದಾರೆ ಎಂಬ ಮಾಹಿತಿ ಬಂದಿರುವುದಾಗಿ ತಿಳಿಸಿ ತನ್ನನ್ನು ಮತ್ತು ಹೆಚ್ ಸಿ 457, ಪಿ ಸಿ 1893 ಇವರನ್ನು ಕರೆದುಕೊಂಡು ಇಲಾಖಾ ಜೀಪಿನಲ್ಲಿ ರಾಷ್ಟ್ರೀಯ ಹೆದ್ದಾರಿ ಉಪ್ಪೂರು ಬಳಿ ವಾಹನದ ತಪಾಸಣೆ ಮಾಡುತ್ತಿದ್ದಾಗ ಸಂಜೆ ಸುಮಾರು 5.00 ಗಂಟೆ ಸಮಯಕ್ಕೆ ಕುಂದಾಪುರದ ಕಡೆಯಿಂದ ಉಡುಪಿ ಕಡೆಗೆ ಒಂದು ಮಾರುತಿ ಓಮಿನಿ ಕಾರು ಹಸಿರು ಮತ್ತು ನೀಲಿ ಮಿಶ್ರಿತ ಬಣ್ಣದ ವಾಹನವು ಬರುತ್ತಿದ್ದು, ಆ ವಾಹನದ ಕ್ರಮ ಸಂಖ್ಯೆ ಕೆಎ-05-ಝುಡ್-2476 ಆಗಿದ್ದು ಸದ್ರಿ ವಾಹನವನ್ನು ನಿಲ್ಲಿಸಲು ನಾವು ಸೂಚನೆ ನೀಡಿದಾಗ ಚಾಲಕನು ಸ್ವಲ್ಪ ನಿಧಾನವಾದಂತೆ ಮಾಡಿ ನಂತರ ವೇಗವಾಗಿ ಉಡುಪಿ ಕಡೆಗೆ ಚಲಾಯಿಸಿಕೊಂಡು ಹೊರಟು ಹೋಗಿದ್ದು, ತಾವು ತಮ್ಮ ಇಲಾಖಾ ವಾಹನದಲ್ಲಿ ಅವರನ್ನು ಬೆನ್ನಟ್ಟಿ ಕೆ ಜಿ ರೋಡ್ ಜಂಕ್ಷನ್ ಬಳಿ ವಾಹನಕ್ಕೆ ಅಡ್ಡವಾಗಿ ತಮ್ಮ ಜೀಪನ್ನು ನಿಲ್ಲಿಸಿ ಅವರನ್ನು ಹಿಡಿದಾಗ ವಾಹನದಲ್ಲಿ ಒಟ್ಟು 5 ಜನ ಇದ್ದಿದ್ದು ಆ ವ್ಯಕ್ತಿಗಳೇ ನೀನು ಹಾಗೂ ನಿನ್ನೊಂದಿಗೆ ಇದ್ದ ಇತರೇ ಆರೋಪಿತರು

ಆಗಿರುತ್ತೀರೆಂದು ನಿಮ್ಮೆಲ್ಲರನ್ನು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

ಪ್ರ.ನಂ.15ಃ ಇದೇ ಸಾಕ್ಷಿ ಮುಂದುವರಿದು ನಂತರ ವಿದ್ಯಾಶಂಕರ ರವರು ಮತ್ತು ತಾವು ಸದ್ರಿ ವಾಹನವನ್ನು ಮತ್ತು ಆರೋಪಿತರಾದ ನಿಮ್ಮೆಲ್ಲರನ್ನು (ಆರೋಪಿತರು) ಕುಂದಾಪುರದ ಪೋಲೀಸ್ ವೃತ್ತ ನಿರೀಕ್ಷಕರ ಮುಂದೆ ಶಂಕರನಾರಾಯಣ ಪೋಲೀಸ್ ಠಾಣೆಯಲ್ಲಿ ವರದಿಯೊಂದಿಗೆ ಹಾಜರುಪಡಿಸಿದ್ದು, ಕುಂದಾಪುರ ವೃತ್ತ ನಿರೀಕ್ಷಕರು ನಿಮ್ಮನ್ನು (ಆರೋಪಿತರನ್ನು) ಮತ್ತು ಸದ್ರಿ ವಾಹನವನ್ನು ಅವರ ವಶಕ್ಕೆ ತೆಗೆದುಕೊಂಡು ಪಂಚನಾಮೆಯನ್ನು (ನಿಪಿ-6) ಪಂಚರ ಸಮಕ್ಷಮ ಜರುಗಿಸಿರುವುದಾಗಿ ಹಾಗೂ ಅಮಾನತುಪಡಿಸಿಕೊಂಡ ಟೆಲಿಫೋನ್ ವಯರ್ (ಮು.ಮಾ.1), ಕಬ್ಬಿಣದ ಸರಳು (ಮು.ಮಾ.2), ಮೊಟೊರೋಲಾ ಕಂಪೆನಿಯ ಮೊಬೈಲ್ (ಮು.ಮಾ.4) ಹಾಗೂ ರಿಲಾಯನ್ಸ ಕಂಪೆನಿಯ ಮೊಬೈಲ್ (ಮು.ಮಾ.5) ಗಳನ್ನು ನೋಡಿ ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

**ಪ್ರ.ನಂ.16ಃ ಭಾಸ್ಕರ** (ಪಿಡಬ್ಲ್ಯೂ-7) ರವರು ತಮ್ಮ ಸಾಕ್ಷ್ಯದಲ್ಲಿ ತಾನು ಶಂಕರನಾರಾಯಣ ಪೋಲೀಸು ಠಾಣೆಯಲ್ಲಿ ಆರಕ್ಷಕನಾಗಿ ಕರ್ತವ್ಯದಲ್ಲಿದ್ದಾಗ ದಿನಾಂಕಃ26-11-2004 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಥಮ ವರ್ತಮಾನ ವರದಿ ಮತ್ತು ಅಸಲು ಫಿರ್ಯಾದಿಯನ್ನು ನ್ಯಾಯಾಧೀಶರಿಗೆ ತಲುಪಿಸಲು ರಾತ್ರಿ 7.00 ಗಂಟೆಗೆ ತನ್ನ ಹತ್ತಿರ ತನ್ನ ಮೇಲಾಧಿಕಾರಿಗಳು ನೀಡಿದ್ದು, ತಾನು ಶಂಕರನಾರಾಯಣದಿಂದ ಹೊರಟು ಕುಂದಾಪುರದ ಜೆ ಎಂ ಎಫ್ ಸಿ ನ್ಯಾಯಾಲಯದ ನ್ಯಾಯಾಧೀಶರಿಗೆ ರಾತ್ರಿ 8.30 ಗಂಟೆಗೆ ತಲುಪಿಸಿದ್ದು, ಶಂಕರನಾರಾಯಣದಿಂದ ಕುಂದಾಪುರಕ್ಕೆ ಸುಮಾರು 27 ಕಿ.ಮೀ. ದೂರ ಇರುತ್ತದೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

**ಪ್ರ.ನಂ.17ಃ ಕೆ. ಶರ್ಫುದ್ದೀನ್ (ಪಿಡಬ್ಲ್ಯೂ-8)** ರವರು ತಮ್ಮ ಸಾಕ್ಷ್ಯದಲ್ಲಿ ತನಗೆ ಪ್ರಾಸಾ.2 ಶೌಕತ್ ಆಲಿ ರವರು ಗೊತ್ತಿದ್ದು, ತನ್ನ ಬಳಿ ಕೆಎ-05-ಝಡ್-2476 ನಂಬ್ರದ ಹಸಿರು ಬಣ್ಣದ ಓಮಿನಿ ಕಾರು ಇದ್ದು ಅದನ್ನು ಪ್ರಾಸಾ.2 ಶೌಕತ್ ಆಲಿಯು ಚಾಲಕನಾಗಿ ಬಾಡಿಗೆಗೆ ಓಡಿಸುತ್ತಿದ್ದು ದಿನಾಂಕಃ25-12-2004 ರಂದು ಬ್ರಹ್ಮಾವರಕ್ಕೆ ಬಾಡಿಗೆಗೆ ಹೋಗಬೇಕೆಂದು ಪ್ರಾಸಾ.2 ರವರು ತನ್ನ ಬಳಿ ಹೇಳಿ ಮಾರನೇ ದಿನ ಬೆಳಿಗ್ಗೆ ವಾಹನವನ್ನು ಬ್ರಹ್ಮಾವರಕ್ಕೆ ಬಾಡಿಗೆಗೆ ತೆಗೆದುಕೊಂಡು ಹೋಗಿದ್ದು, ಅದೇ ದಿನ ಸಂಜೆ ಸುಮಾರು 6.00 ಗಂಟೆಗೆ ಶೌಕತ್ ಆಲಿಯವರ ತಾಯಿ ವಾಹನವು ಅಪಘಾತಕ್ಕೆ ಈಡಾಗಿದ್ದು ಯಾರೋ ಶೌಕತ್ ಆಲಿಯವರನ್ನು ಹೊಡೆದು ಕಾರನ್ನು ತೆಗೆದುಕೊಂಡು ಹೋಗಿದ್ದಾರೆ ಎಂದು ತಿಳಿಸಿದ್ದು, ಮಾರನೇ ದಿನ ಬೆಳಿಗ್ಗೆ ತಾನು ಮತ್ತು ಚಾಸಾ.6 ಈರ್ಶದ್ ಇಬ್ಬರೂ ಪ್ರಾಸಾ.2 ಶೌಕತ್ ಆಲಿಯವರು ದಾಖಲಾಗಿದ್ದ ಕುಂದಾಪುರದ ಚಿನ್ಮಯಿ ಆಸ್ಪತ್ರೆಗೆ ಬಂದಾಗ ಶೌಕತ್ ಆಲಿಯವರು ಆತನಿಗೆ ಬಾಳೆಬರೆ ಘಾಟ್ ಬಳಿ ಆತನನ್ನು ಹೊಡೆದು ಕಾರಿನಲ್ಲಿ ಬಂದಿದ್ದ ಗಿರಾಕಿಗಳು ಕಾರನ್ನು ಕದ್ದುಕೊಂಡು ಹೋಗಿದ್ದು, ಆ ನಂತರ ಯಾರೋ ಆತನನ್ನು ಕರೆತಂದು ಆಸ್ಪತ್ರೆಗೆ ಸೇರಿಸಿದ್ದಾಗಿ ಹೇಳಿದ್ದು ಆತನ ತಲೆಗೆ ಹೊಡೆತ ಬಿದ್ದು ಗಾಯವಾಗಿದ್ದು ಆತನು 3 ದಿನಗಳ ಕಾಲ ಸದ್ರಿ ಆಸ್ಪತ್ರೆಯಲ್ಲಿಯೇ ಇದ್ದಿರುವುದಾಗಿ ತಿಳಿಸಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. **ಈ ಬಗ್ಗೆ ನೀನೇನು ಹೇಳುತ್ತೀ?**

ಉತ್ತರಃ ಸುಳ್ಳು

ಪ್ರ.ನಂ.18ಃ ಇದೇ ಸಾಕ್ಷಿ ಮುಂದುವರಿದು ನಂತರ ತಾನು ಮತ್ತು ಗಾಯಾಳು ಪೋಲೀಸರೊಂದಿಗೆ ಪೋಲೀಸು ಠಾಣೆಗೆ ಬಂದಿದ್ದು, ಪೋಲೀಸು ಠಾಣೆಯಲ್ಲಿ ಪ್ರಾಸಾ.2 ರವರು ಆತನ ರಕ್ತ ತಾಗಿದ ಒಂದು ಟೀ ಶರ್ಟನ್ನು ಪೋಲೀಸರ ಮುಂದೆ ಹಾಜರುಪಡಿಸಿದ್ದು, ಸದ್ರಿ ಟೀ ಶರ್ಟನ್ನು ಪೋಲೀಸರು ಪಂಚನಾಮೆ (ನಿಪಿ-4) ಅಡಿಯಲ್ಲಿ ಅಮಾನತುಪಡಿಸಿಕೊಂಡಿದ್ದು, ನಂತರ ಪೋಲೀಸು ಠಾಣೆಯಿಂದ ತಾವೆಲ್ಲರೂ ಜೀಪಿನಲ್ಲಿ ಘಟನಾ ಸ್ಥಳಕ್ಕೆ ಹೋದಾಗ ಪ್ರಾಸಾ.2 ರವರು ಘಟನೆ ನಡೆದ ಸ್ತಳವೆಂದು ಬಾಳೆಬರೆ ಘಾಟ್‌ನ ಮಾಸ್ತಿಕಟ್ಟೆ ಕಡೆಗೆ ಹೋಗುವ ಥಾರು ರಸ್ತೆಯ ಎಸ್ ಆಕಾರದ ತಿರುವು ಇರುವ

ಜಾಗವನ್ನು ತೋರಿಸಿದ್ದು, ಪೋಲೀಸರು ಸದ್ರಿ ಸ್ಥಳವನ್ನು ಪರಿಶೀಲಿಸಿ ಪಂಚನಾಮೆ (ನಿಪಿ-5) ರಚಿಸಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

**ಪ್ರ.ನಂ.19ಃ ಎಂ.ಪಿ.ವಿದ್ಯಾಶಂಕರ್ (ಪಿಡಬ್ಲ್ಯೂ-9)** ರವರು ತಮ್ಮ ಸಾಕ್ಷ್ಯದಲ್ಲಿ ತಾನು ಬ್ರಹ್ಮಾವರ ವೃತ್ತದಲ್ಲಿ ವೃತ್ತ ನಿರೀಕ್ಷಕನಾಗಿ ದಿನಾಂಕಃ26-12-2004 ರಂದು ಮಧ್ಯಾಹ್ನ 3.30 ರ ಸಮಯದಲ್ಲಿ ಕಚೇರಿಯಲ್ಲಿರುವಾಗ ಉಡುಪಿ ಜಿಲ್ಲಾ ಕಂಟ್ರೋಲ್ ರೂಮ್ ನಿಂದ ನಿಸ್ತಂತು ಮಾಹಿತಿ ಬಂದಂತೆ ಶಂಕರನಾರಾಯಣ ಪೋಲೀಸು ಠಾಣಾ ವ್ಯಾಪ್ತಿಯಲ್ಲಿ ಮಾರುತಿ ಓಮಿನಿ ಕಾರಿನ ಸಂಖ್ಯೆ ಕೆಎ-05-ಝಡ್-2476 ರ ಚಾಲಕನಿಗೆ ಯಾರೋ ಹಲ್ಲೆ ಮಾಡಿ ಆತನನ್ನು ವಾಹನದಿಂದ ದೂಡಿ ವಾಹನವನ್ನು ಚಲಾಯಿಸಿಕೊಂಡು ಹೋಗಿದ್ದಾರೆಂದು ಮಾಹಿತಿ ದೊರಕಿದ್ದು ಈ ವಾಹನದ ಶೋಧನೆಗಾಗಿ ಪೋಲೀಸ್ ಅಧಿಕಾರಿಗಳು ಅವರವರ ಸರಹದ್ದಿನಲ್ಲಿ ಕಾರ್ಯಾಚರಣೆ ಮಾಡಬೇಕಾಗಿ ತಿಳಿಸಿದಂತೆ ತಕ್ಷಣವೇ ತಾನು ತನ್ನ ಸಿಬ್ಬಂದಿಯೊಂದಿಗೆ ತನ್ನ ಇಲಾಖಾ ವಾಹನದಲ್ಲಿ ಉಪ್ಪೂರು ಗ್ರಾಮದ ಉಪ್ಪೂರು ಬಸ್ ಸ್ಟ್ಯಾಂಡ್ ಬಳಿ ಅಂದರೆ ರಾಷ್ಟ್ರೀಯ ಹೆದ್ದಾರಿ 17 ರಲ್ಲಿ ವಾಹನಗಳ ತಪಾಸಣೆ ಮಾಡುತ್ತಿದ್ದಾಗ ಸಂಜೆ ಸುಮಾರು 5 ಗಂಟೆ ಸಮಯಕ್ಕೆ ಕುಂದಾಪುರದ ಕಡೆಯಿಂದ ಸದ್ರಿ ನಂಬರಿನ ಮಾರುತಿ ಓಮಿನಿ ವಾಹನ ಬರುವುದನ್ನು ನೋಡಿ ಅದನ್ನು ನಿಲ್ಲಿಸಲು ಸೂಚನೆ ನೀಡಿದಾಗ ವಾಹನದ ಚಾಲಕನು ಸ್ವಲ್ಪ ನಿಧಾನಿಸಿದಂತೆ ಮಾಡಿ ನಂತರ ವೇಗವಾಗಿ ವಾಹನವನ್ನು ಚಲಾಯಿಸಿಕೊಂಡು ಮುಂದೆ ಹೋಗಿದ್ದು ತಕ್ಷಣವೇ ತಾವು ಸದ್ರಿ ವಾಹನವನ್ನು ಬೆನ್ನಟ್ಟಿ ಕೆ.ಜಿ.ರೋಡ್ ಜಂಕ್ಷನ್ ಬಳಿ ಸದ್ರಿ ವಾಹನಕ್ಕೆ ತಮ್ಮ ಜೀಪನ್ನು ಅಡ್ಡ ನಿಲ್ಲಿಸಿ ಆ ವಾಹನವನ್ನು ಸುತ್ತುವರೆದಿದ್ದು ಸದ್ರಿ ವಾಹನದಲ್ಲಿ ಚಾಲಕನೂ ಸೇರಿದಂತೆ ಒಟ್ಟು 5 ಜನರಾದ ನೀನು ಹಾಗೂ ನಿನ್ನೊಂದಿಗೆ ಇತರೇ ಆರೋಪಿತರಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

ಪ್ರ.ನಂ.20ಃ ಇದೇ ಸಾಕ್ಷಿ ಮುಂದುವರಿದು ನೀವೆಲ್ಲರೂ (ಆರೋಪಿತರು) ತಮ್ಮನ್ನು ನೋಡಿದ ತಕ್ಷಣ ಗಾಬರಿಗೊಂಡಿದ್ದು ನೀವೆಲ್ಲಾ (ಆರೋಪಿತರು) ಓಡಿ ಹೋಗದಂತೆ ತಮ್ಮ ಸಿಬ್ಬಂದಿಯವರು ನೋಡಿಕೊಂಡಿದ್ದು, ಕಂಟ್ರೋಲ್ ರೂಮ್ ನಿಂದ ಬಂದಿದ್ದ ನಿಸ್ತಂತು ಮಾಹಿತಿಗೂ ಮತ್ತು ಸದ್ರಿ ವಾಹನದ ನೊಂದಣಿ ಸಂಖ್ಯೆಗೂ ಒಂದಕ್ಕೊಂದು ತಾಳೆಯಾಗುತ್ತಿದ್ದ ಕಾರಣ ನಿಮ್ಮೆಲ್ಲರನ್ನು (ಅರೋಪಿತರನ್ನು) ಹಾಗೂ ವಾಹನವನ್ನು ತನ್ನ ವಶಕ್ಕೆ ತೆಗೆದುಕೊಂಡು ನಿಮ್ಮೆಲ್ಲರನ್ನು ವಿಚಾರಿಸಿದಾಗ ನೀನು ನಿನ್ನ ಹೆಸರನ್ನು ಫಾರುಕ್ ಎಂದು ಹಾಗೂ ನಿನ್ನೊಂದಿಗೆ ಇದ್ದ ಇತರೇ ಆರೋಪಿತರು ಅವರವರ ಹೆಸರುಗಳನ್ನು ಮೊಹಿದುಲ್ಲಾ, ಆಸೀಫ್, ಮುನ್ನಾ ಮತ್ತು ಮೊಹಮ್ಮದ್ ಬಿಲಾಲ್ ಎಂದು ತಿಳಿಸಿದ್ದು, ನಿಮ್ಮೆಲ್ಲರನ್ನು (ಆರೋಪಿತರು) ಹಾಗೂ ವಾಹನವನ್ನು ತೆಗದುಕೊಂಡು ಶಂಕರನಾರಾಯಣ ಪೋಲೀಸು ಠಾಣೆಗೆ ಹೋಗಿ ಅಲ್ಲಿದ್ದ ಕುಂದಾಪುರ ವೃತ್ತ ನಿರೀಕ್ಷಕರಾದ ಶೇಖರಪ್ಪ ರವರಿಗೆ ವರದಿಯೊಂದಿಗೆ (ನಿಪಿ-8) ಮುಂದಿನ ಕ್ರಮಕ್ಕಾಗಿ ವಹಿಸಿಕೊಟ್ಟೆನೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

**ಪ್ರ.ನಂ.21ಃ ಎಂ. ಶೇಖರಪ್ಪ (ಪಿಡಬ್ಲ್ಯೂ-10)** ರವರು ತಮ್ಮ ಸಾಕ್ಷ್ಯದಲ್ಲಿ ತಾನು ಕುಂದಾಪುರದಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯದಲ್ಲಿದ್ದಾಗ ಶಂಕರನಾರಾಯಣ ಪೋಲೀಸು ಠಾಣೆ ತನ್ನ ವೃತ್ತದ ವ್ಯಾಪ್ತಿಯಲ್ಲಿ ಬರುತ್ತಿದ್ದು, ದಿನಾಂಕಃ26-12-2004 ರಂದು ಮಧ್ಯಾಹ್ನ 3.40 ಗಂಟೆಗೆ ಶಂಕರನಾರಾಯಣ ಪೋಲೀಸು ಠಾಣಾ ಪಿ ಎಸ್ ಐ ಆದ ಚಾಸಾ.15 ರಾಘವ ಪಡೀಲ್ ರವರು ಒಂದು ಡಕಾಯಿತಿ ಪ್ರಕರಣದ ಬಗ್ಗೆ ತನಗೆ ಹಾಗೂ ಕಂಟ್ರೋಲ್ ರೂಮಿಗೆ ಮೆಸೇಜ್ ನೀಡಿರುವುದಾಗಿ ತಿಳಿಸಿದ್ದು ತಾನು ಸಂಜೆ 6.40 ಗಂಟೆಗೆ ಶಂಕರನಾರಾಯಣ ಪೋಲೀಸ್ ಠಾಣೆಗೆ ಹೋದಾಗ ಪಿ ಎಸ್ ಐ ರವರು ಶೌಕತ್ ಆಲಿ ಎನ್ನುವವರು ನೀಡಿದ ನಿಪಿ-3 ಫಿರ್ಯಾದಿಯ ಆಧಾರದ ಮೇಲೆ ಶಂಕರನಾರಾಯಣ ಪೋಲೀಸ್ ಠಾಣಾ ಮೊಕದ್ದಮೆ ಸಂಖ್ಯೆ 159/2004 ರಲ್ಲಿ ಒಂದು ಪ್ರಕರಣ ನೋಂದಾಯಿಸಿಕೊಂಡು ಪ್ರಥಮ ವರ್ತಮಾನ ವರದಿ (ನಿಪಿ-9) ಯನ್ನು ನ್ಯಾಯಾಲಯಕ್ಕೆ

ರವಾನಿಸಿಕೊಂಡಿದ್ದು ನಂತರ ತಾನು ಕಡತವನ್ನು ಸ್ವೀಕರಿಸಿ ಮುಂದಿನ ತನಿಖೆಯನ್ನು ವಹಿಸಿಕೊಂಡೆನೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

ಪ್ರ.ನಂ.22ಃ ಇದೇ ಸಾಕ್ಷಿ ಮುಂದುವರಿದು ಅದೇ ದಿನ ಸಂಜೆ 7.00 ಗಂಟೆ ಸಮಾರಿಗೆ ಬ್ರಹ್ಮಾವರದ ವೃತ್ತ ನಿರೀಕ್ಷಕರು ಮತ್ತು ಅವರ ಸಿಬ್ಬಂದಿಯವರು ಶಂಕರನಾರಾಯಣ ಪೋಲೀಸು ಠಾಣೆಗೆ ಹಾಜರಾಗಿ ನಿಪಿ-8 ರಂತೆ ವರದಿಯೊಂದಿಗೆ ನಿನ್ನನ್ನು (ಆರೋಪಿ) ಹಾಗೂ ನಿನ್ನೊಂದಿಗೆ ಇದ್ದ ಇತರೇ 4 ಜನ ಆರೋಪಿತರನ್ನು ಮತ್ತು ಕೆಎ-05-ಝುಡ್-2476 ವಾಹನವನ್ನು ತನ್ನ ಮುಂದೆ ಹಾಜರುಪಡಿಸಿದ್ದು, ಆರೋಪಿಗಳಾದ ನಿಮ್ಮೆಲ್ಲರ ಹೆಸರುಗಳನ್ನು ವಿಚಾರಿಸಿ ದೃಢಪಡಿಸಿಕೊಂಡು ಆರೋಪಿಗಳಾದ ನಿಮ್ಮೆಲ್ಲರ ಪ್ರಕ್ರಿಯೆ ಅನುಸರಿಸಿ ದಸ್ತಗಿರಿ ಮಾಡಿಕೊಂಡೆ ಮತ್ತು ಆರೋಪಿಗಳಾದ ನಿಮ್ಮೆಲ್ಲರ ಸ್ವ ಇಚ್ಛಾ ಹೇಳಿಕೆ ಬರೆದುಕೊಂಡೆನೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

ಪ್ರ.ನಂ.23ಃ ಇದೇ ಸಾಕ್ಷಿ ಮುಂದುವರಿದು ನಂತರ ನಿನ್ನ ಜೊತೆಗಿದ್ದ ಆರೋಪಿ ಮಹಮ್ಮದ್ ಬಿಲಾಲ್ ಈತನು ತಮ್ಮ ಠಾಣೆಯ ಮುಂದೆ ನಿಲ್ಲಿಸಿದ್ದ ಮಾರುತಿ ಓಮಿನಿ ಕಾರಿನ ಹಿಂಭಾಗಕ್ಕೆ ಕೈ ಹಾಕಿ ಒಂದು ಟೆಲಿಫೋನ್ ವಯರ್ (ಮು.ಮಾ.1) ತೆಗೆದು ಹಾಜರುಪಡಿಸಿದ್ದು, ಇನ್ನೊಬ್ಬ ಆರೋಪಿ ಮುನ್ನಾ ಯಾನೆ ಮೊಹಮ್ಮದ್ ಮುನ್ನಾ ಈತನು ಕಾರಿನ ಮುಂಭಾಗದ ಸೀಟಿನ ಕೆಳಗೆ ಕೈ ಹಾಕಿ ಒಂದು ಕಬ್ಬಿಣದ ರಾಡ್‌ನ್ನು (ಮು.ಮಾ.2) ಹಾಜರುಪಡಿಸಿದ್ದು, ಸದ್ರಿ ವಸ್ತುಗಳನ್ನು ಪಂಚರ ಸಮಕ್ಷಮ ಪಂಚನಾಮೆ (ನಿಪಿ-6) ಅಡಿಯಲ್ಲಿ ಅಮಾನತುಪಡಿಸಿಕೊಂಡಿರುತ್ತೇನೆಂದು ಹಾಗೂ ಅದೇ ಪಂಚನಾಮೆ ಅಡಿಯಲ್ಲಿ ಆರೋಪಿಯಾದ ನೀನು ಒಂದು ಮೊಟೊರೋಲಾ ಕಂಪೆನಿಯ ಮೊಬೈಲ್ ಫೋನನ್ನು (ಮು.ಮಾ.4) ಹಾಗೂ ಇನ್ನೊಬ್ಬ ಆರೋಪಿ ಮೊಹಿದುಲ್ಲಾ ಈತನು ರಿಲಾಯನ್ಸ ಕಂಪೆನಿಯ ಒಂದು ಮೊಬೈಲ್ ಫೋನ್ (ಮು.ಮಾ.5) ಹಾಜರುಪಡಿಸಿದ್ದು, ಮೇಲ್ಕಂಡ ಎಲ್ಲಾ

ವಸ್ತುಗಳನ್ನು ಪಂಚನಾಮೆ (ನಿಪಿ-6) ಅಡಿಯಲ್ಲಿ ಅಮಾನತುಪಡಿಸಿಕೊಂಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

ಪ್ರ.ನಂ.24ಃ ಇದೇ ಸಾಕ್ಷಿ ಮುಂದುವರಿದು ಅದೇ ದಿನ ಪ್ರಾಸಾ.4 ದೇವರಾಜ, ಪ್ರಾಸಾ.3 ಸೂರ ಹಾಗೂ ಚಾಸಾ.15 ಇವರುಗಳ ಹೇಳಿಕೆಗಳನ್ನು ಬರೆದುಕೊಂಡು ಅಮಾನತುಪಡಿಸಿಕೊಂಡ ವಸ್ತುಗಳನ್ನು ಶಂಕರನಾರಾಯಣ ಪೋಲೀಸು ಠಾಣೆಯ ಮಾಲು ಪಟ್ಟಿ ಸಂಖ್ಯೆ 144/2004 ರಲ್ಲಿ ಅಳವಡಿಸಿಕೊಂಡಿರುತ್ತೇನೆಂದು ಹಾಗೂ ನ್ಯಾಯಾಲಯದ ಮುಂದಿರುವ ಅಮಾನತುಪಡಿಸಿಕೊಂಡ ವಸ್ತುಗಳನ್ನು (ಮು.ಮಾ.1, 2, 4 ಮತ್ತು 5) ನೋಡಿ ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

ಪ್ರ.ನಂ.25ಃ ಇದೇ ಸಾಕ್ಷಿ ಮುಂದುವರಿದು ದಿನಾಂಕಃ27-12-2004 ರಂದು ಕುಂದಾಪುರದ ಚಿನ್ಮಯಿ ಆಸ್ಪತ್ರೆಗೆ ತೆರಳಿ ವೈದ್ಯರ ಅನುಮತಿ ಪಡೆದು ಫಿರ್ಯಾದಿದಾರರನ್ನು ಕರೆದುಕೊಂಡು ಹೋಗಲು ಅನುಮತಿ ಕೇಳಿದಾಗ ವೈದ್ಯರು ಆತನು ಇನ್ನೂ ಚಿಕಿತ್ಸೆಯಲ್ಲಿದ್ದಾನೆಂದು ಹೇಳಿದ್ದು ವೈದ್ಯರಿಗೆ ಫಿರ್ಯಾದಿದಾರರ ಮಾದರಿ ರಕ್ತವನ್ನು ಶೇಖರಿಸುವಂತೆ ಕೋರಿಕೊಂಡು ಅದೇ ದಿನ ನಿಮ್ಮೆಲ್ಲರ (ಆರೋಪಿಗಳ) ನ್ಯಾಯಾಂಗ ಬಂಧನ ಕೋರಿ ನ್ಯಾಯಾಲಯಕ್ಕೆ ಹಾಜರುಪಡಿಸಿ ತಹಶೀಲ್ದಾರ್ ರವರಿಗೆ ನಿಮ್ಮೆಲ್ಲರ (ಆರೋಪಿತರ) ಗುರುತು ಹಚ್ಚುವ ಕವಾಯತ್ ನಡೆಸಿಕೊಡಲು ಮನವಿ ಸಲ್ಲಿಸಿದೆನೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

ಪ್ರ.ನಂ.26ಃ ಇದೇ ಸಾಕ್ಷಿ ಮುಂದುವರಿದು ದಿನಾಂಕಃ30-12-2004 ರಂದು ಫಿರ್ಯಾದಿದಾರರು ತನ್ನ ಕಚೇರಿಗೆ ಹಾಜರಾಗಿ ಘಟನಾ ಸಮಯದಲ್ಲಿ ಆತನು ಧರಿಸಿದ್ದ ಒಂದು ಟೀ ಶರ್ಟು (ಮು.ಮಾ.3) ಹಾಜರುಪಡಿಸಿದ್ದು, ರಕ್ತದ ಕಲೆಗಳಾಗಿದ್ದ ಸದ್ರಿ ಟೀ

ಶರ್ಟನ್ನು ಪಂಚರ ಸಮಕ್ಷಮ ಪಂಚನಾಮೆ (ನಿಪಿ-4) ಅಡಿಯಲ್ಲಿ ಅಮಾನತುಪಡಿಸಿ ಸದ್ರಿ ವಸ್ತುವನ್ನು ಠಾಣಾ ಸ್ವತ್ತು ಪಟ್ಟಿ ಸಂಖ್ಯೆ 149/2004 ರಲ್ಲಿ ಅಳವಡಿಸಿಕೊಂಡೆನೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂ.27ಃ ಇದೇ ಸಾಕ್ಷಿ ಮುಂದುವರಿದು ಅದೇ ದಿನ ಫಿರ್ಯಾದಿದಾರರು ತನ್ನನ್ನು ಮತ್ತು ಪಂಚರನ್ನು ಘಟನಾ ಸ್ತಳಕ್ಕೆ ತಮ್ಮ ಜೀಪಿನಲ್ಲಿ ಕರೆದುಕೊಂಡು ಹೋಗಿ ಘಟನಾ ಸ್ಥಳವನ್ನು ಅಂದರೆ ಬಾಳೆಬರೆ ಘಾಟ್ ಹೊಸಂಗಡಿ ಕಡೆಯಿಂದ ಮಾಸ್ತಿಕಟ್ಟೆ ಕಡೆಗೆ ಹೋಗುವ ಥಾರು ರಸ್ತೆ ಎಸ್ ಆಕಾರದಲ್ಲಿದ್ದು ತಿರುವಿನ ಮಣ್ಣು ರಸ್ತೆಯನ್ನು ತೋರಿಸಿದ್ದು ಸದ್ರಿ ಸ್ಥಳವನ್ನು ಕೂಲಂಕುಷವಾಗಿ ಪರಿಶೀಲಿಸಿ ಪಂಚರ ಸಮಕ್ಷಮ ಪಂಚನಾಮೆ (ನಿಪಿ-5) ರಚಿಸಿ ಸ್ಥಳದಲ್ಲಿ ಒಂದು ಕಚ್ಚಾ ನಕಾಶೆ (ನಿಪಿ-12) ತಯಾರಿಸಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

ಪ್ರ.ನಂ.28ಃ ಇದೇ ಸಾಕ್ಷಿ ಮುಂದುವರಿದು ದಿನಾಂಕಃ04-01-2005 ರಂದು ಕಾರನ್ನು ನ್ಯಾಯಾಲಯದ ಆದೇಶದಂತೆ ಮಾಲೀಕರಿಗೆ ಬಿಟ್ಟುಕೊಟ್ಟಿದ್ದು ದಿನಾಂಕಃ10-01-2005 ರಂದು ಅಮಾನತುಪಡಿಸಿಕೊಂಡ ವಸ್ತುಗಳಲ್ಲಿ ಟೆಲಿಫೋನ್ ವಯರ್, ಕಬ್ಬಿಣದ ರಾಡ್ ಮತ್ತು ಫಿರ್ಯಾದಿದಾರರ ಟೀ ಶರ್ಟು ಇವುಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯ ಮಂಗಳೂರಿಗೆ ಕಳುಹಿಸಿಕೊಟ್ಟೆನೆಂದು ಹಾಗೂ ದಿನಾಂಕಃ12-01-2005 ರಂದು ಫಿರ್ಯಾದಿದಾರರ ಮರು ಹೇಳಿಕೆ ಬರೆದುಕೊಂಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

ಪ್ರ.ನಂ.29ಃ ಇದೇ ಸಾಕ್ಷಿ ಮುಂದುವರಿದು ದಿನಾಂಕಃ15-01-2005 ರಂದು ಫಿರ್ಯಾದಿದಾರರಿಗೆ ಸಂಬಂಧಿಸಿದ ಗಾಯದ ಪ್ರಮಾಣ ಪತ್ರ (ನಿಪಿ-1) ವನ್ನು ವೈದ್ಯರಿಂದ

ಸ್ವೀಕರಿಸಿಕೊಂಡೆನೆಂದೂ ಹಾಗೂ ಅದೇ ದಿನ ಚಾಸಾ.4 ಅಜರುದ್ದೀನ್ ರವರನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿರುತ್ತೇನೆಂದು ಹಾಗೂ ದಿನಾಂಕಃ15-02-2005 ರಂದು ತನಿಖೆಯನ್ನು ಪೂರೈಸಿ ನಿಮ್ಮೆಲ್ಲರ (ಆರೋಪಿಗಳ) ವಿರುದ್ಧ ದೋಷಾರೋಪಣಾ ಪತ್ರ ಸಲ್ಲಿಸಿರುತ್ತೇನೆಂದು ಹಾಗೂ ದಿನಾಂಕಃ12-03-2005 ರಂದು ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ (ನಿಪಿ-13) ಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

ಪ್ರ.ನಂ.30: ನೀನು ಏನಾದರೂ ಹೇಳುವುದು ಇದೆಯಾ?

ಉತ್ತರಃ ನಾನೇನು ತಪ್ಪು ಮಾಡಿಲ್ಲ . ನನ್ನಮೇಲೆ ಸುಳ್ಳು ಪರಕರಣ ಮಾಡಿದ್ದಾರೆ.

ಪ್ರ.ನಂ.31: ನಿನ್ನ ಪರ ಸಾಕ್ಷಿದಾರರನ್ನು ವಿಚಾರಣೆ ಮಾಡುತ್ತೀರಾ?

ಉತ್ತರಃ ನನ್ನ ಪರವಾಗಿ ಸಾಕ್ಷಿ ಇಲ್ಲಾ.

ಮೇಲ್ಕಂಡ ಹೇಳಿಕೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾಗಿ, ಕೇಳಲಾಗಿ ಅವರು ಹೇಳಿದ ಉತ್ತರವನ್ನು ದೃಢೀಕರಿಸಲಾಗಿದೆ.

ದಿನಾಂಕಃ 05-12-2025

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕುಂದಾಪುರ.